**ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ**

ದಿನಾಂಕ : 07-09-2018

# ವರದಿ

**ವಿವೇಕವು ಬುದ್ಧಿವಂತಿಕೆಗಿಂತ ಮಿಗಿಲಾದದ್ದು**

**ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸ್ವಾಗತ ಸಮಾರಂಭ ಉದ್ಘಾಟಿಸಿ – ಪ್ರೊ. ಆರ್ ಎಂ ಚಿಂತಾಮಣಿ**

ಕೊಳ್ಳೇಗಾಲ : 07 ಸೆಪ್ಟೆಂಬರ್, 2018 : ವಿವೇಕತೆ ಪ್ರತಿಯೊಬ್ಬರಿಗೂ ಮುಖ್ಯ. ವಿವೇಕವು ಬುದ್ಧಿವಂತಿಕೆಗಿಂತ ಮಿಗಿಲಾದದ್ದು. ನಮ್ಮ ನಡವಳಿಕೆ ಕುರಿತು ಸರಿಯಾದ ನಿರ್ಧಾರ ತೆಗೆದು ಕೊಳ್ಳುವುದೇ ವಿವೇಕ ಎಂದು ಪ್ರೊ ಆರ್ ಎಂ ಚಿಂತಾಮಣಿ ಅಭಿಪ್ರಾಯಿಸಿದರು.

ಇಲ್ಲಿಯ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸ್ನಾತಕೋತ್ತರ ವಿಭಾಗದ ವತಿಯಿಂದ ಮೊದಲನೇ ವರ್ಷದ ವಿದ್ಯಾರ್ಥಿನಿಯರಿಗೆ ಆಯೋಜಿಸಿದ್ದ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಜ್ಞಾನ ಅನುಭವ, ಸಹಿಷ್ಣುತೆ, ಸಂಸ್ಕಾರ, ಜೀವನದ ಏರಿಳಿತಗಳನ್ನು ಸಮನಾಗಿ ಸ್ವೀಕರಿಸುವ ಮನೋಧರ್ಮಗಳೆಲವೂ ವಿವೇಕದಲ್ಲಿ ಅಡಕವಾಗಿದೆ. ಯಾವುದೇ ಪರಿಸ್ಥಿತಿಯಲ್ಲಿ ಸಮಚಿತ್ತ ಕಾಯ್ದು ಕೊಳ್ಳುವ ಬುದ್ಧಿವಂತಿಕೆಯನ್ನು ವಿದ್ಯಾರ್ಥಿಗಳು ಹೊಂದಬೇಕು ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಡಾ. ಎಂ ಪ್ರಭು ಪ್ರಸ್ತುತ ವಿಧ್ಯಾರ್ಥಿಗಳು ಸ್ಪರ್ಧಾ ಯುಗದಲ್ಲಿರುವುದನ್ನು ಅರಿಯಬೇಕು. ಇಂದಿನ ವಿಶ್ವದ ಮಾರುಕಟ್ಟೆಯಲ್ಲಿ ಸೃಜನಶೀಲತೆ ಮತ್ತು ಕೌಶಲ್ಯತೆಗೆ ಹೆಚ್ಚಿನ ಬೆಲೆ ಇದೆ. ಸಾಮರ್ಥ್ಯಕ್ಕಿಂತಲೂ ಹೆಚ್ಚಾಗಿ ಕೌಶಲ್ಯದ ಅಗತ್ಯತೆ ಹೆಚ್ಚಿದೆ. ತಂತ್ರಜ್ಞಾನ ವೇಗದ ಬೆಳವಣಿಗೆ ಕಾಣುತ್ತಿದ್ದು, ತಾವೂ ಕೂಡ ಅದರ ಜೊತೆ ಜೊತೆಗೆ ಹೆಜ್ಜೆ ಹಾಕಬೇಕಾದ ಅನಿವಾರ್ಯತೆಯಿದೆ. ನಿಮ್ಮ ಬುದ್ಧಿವಂತಿಕೆ, ಸಾಮರ್ಥ್ಯ, ಕೌಶಲ್ಯತೆ ಎಲ್ಲವನ್ನು ಸರಿಯಾಗಿ ಬಳಸಿಕೊಂಡಿದ್ದೇ ಆದರೆ ಯಶಸ್ಸನ್ನು ಕಾಣಬಹುದಾಗಿದೆ. ಶಿಕ್ಷಣ ಸಂಸ್ಥೆಗಳೆಲ್ಲವೂ ಕೂಡ ಇಂದು ಜ್ಞಾನ ಪ್ರಸಾರ ಮಾಡುವ ಬದಲು ವಿದ್ಯಾರ್ಥಿಗಳನ್ನು ವಿವೇಕಿಗಳನ್ನಾಗಿ ಮಾಡುವ ಜವಾಬ್ದಾರಿ ಹೊರಬೇಕಿದೆ ಎಂದು ತಿಳಿಸಿದರು.

ಸ್ನಾತಕೋತ್ತರ ವಿಭಾಗದ ಪ್ರಾಧ್ಯಾಪಕರಾದ ಶ್ರೀ ಪಿ ಮಹೇಶ್, ಪ್ರೊ. ಎಂ ಅರ್ಚನ, ಪ್ರೊ. ಎಸ್ ಸರಸ್ವತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕು. ಕ್ಯಾರೊಲಿನ್ ಸ್ವಾಗತಿಸಿದರು, ಶ್ರೀ ಕರಣ್ ವಂದಿಸಿದರು ಕು. ಅಂಬಿಕಾ ನಿರೂಪಿಸಿದರು.

ಸ್ನಾತಕೋತ್ತರ ವಿಭಾಗದ ವತಿಯಿಂದ ಮೊದಲನೇ ವರ್ಷದ ವಿದ್ಯಾರ್ಥಿನಿಯರಿಗೆ ಆಯೋಜಿಸಿದ್ದ ಸ್ವಾಗತ ಸಮಾರಂಭವನ್ನು ಆಯೋಜಿಸಿಲಾಗಿತ್ತು. ಚಿತ್ರದಲ್ಲಿ ಪ್ರೊ. ಎಂ. ಅರ್ಚನ, ಪ್ರೊ. ಪಿ ಮಹೇಶ್, ಪ್ರೊ. ಆರ್ ಎಂ ಚಿಂತಾಮಣಿ, ಡಾ. ಎಂ. ಪ್ರಭು ಹಾಗೂ ಪ್ರೊ. ಎಸ್ ಸರಸ್ವತಿಯವರನ್ನು ಕಾಣಬಹುದು.




ಸ್ನಾತಕೋತ್ತರ ವಿಭಾಗದ ವತಿಯಿಂದ ಮೊದಲನೇ ವರ್ಷದ ವಿದ್ಯಾರ್ಥಿನಿಯರಿಗೆ ಆಯೋಜಿಸಿದ್ದ ಸ್ವಾಗತ ಸಮಾರಂಭದಲ್ಲಿ ಪ್ರೊ. ಆರ್ ಎಂ ಚಿಂತಾಮಣಿ ರವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಪ್ರೊ. ಎಂ. ಅರ್ಚನ, ಪ್ರೊ. ಪಿ ಮಹೇಶ್, ಡಾ. ಎಂ. ಪ್ರಭು ಹಾಗೂ ಪ್ರೊ. ಎಸ್ ಸರಸ್ವತಿಯರನ್ನು ಕಾಣಬಹುದು.




ಕಾರ್ಯಕ್ರಮದಲ್ಲಿ ಭಾಗವಹಿಸಿರು ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರುಗಳು

